

ಮೈಸೂರು ನಗರದ ವಿಹಂಗಮ ನೋಟ

ಸಿಕ್ಕರೆ ಮಾನವರ ಹಸ್ತಕ್ಷೇಪ ಮತ್ತಷ್ಟು ಹೆಚ್ಚುತ್ತದೆ. ಇರುವ ಪರಿಸರಕ್ಕೂ ಪೆಟ್ಟು ಬೀಳುತ್ತದೆ, ಜೀವಸಂಕುಲ ನಾಶವಾಗುತ್ತದೆ. ಮೈಸೂರಿನ ಜನರಿಗೆ ಆಮ್ಲಜನಕ ನೀಡುತ್ತಿರುವ ಸಸ್ಯ ಸಂಪತ್ತು ಕಳೆದುಕೊಂಡು ಬದುಕುವುದಾದರೂ ಹೇಗೆ ಎಂದು ಪರಿಸರವಾದಿಗಳು ಕೇಳುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ವಿವಿಧ ರೀತಿಯಲ್ಲಿ ಹೋರಾಟ, ಪ್ರತಿಭಟನೆಗಳು ನಡೆದಿವೆ. ಕಟ್ಟಡ ನಿರ್ಮಾಣ, ರಸ್ತೆ ವಿಸ್ತರಣೆ ವಿರೋಧಿಸಿ ಮೈಸೂರು ನಗರ ಹಾಗೂ ಬೆಟ್ಟದಲ್ಲಿ ಚಳವಳಿಗಳು ವಿವಿಧ ಮಾದರಿಯಲ್ಲಿ ರೂಪುಗೊಂಡಿವೆ. ಪರಿಸರ ಉಳಿಸಿ, ಸಂರಕ್ಷಿಸುವ ಮೂಲಕ ಕನಿಷ್ಠ ಅಭಿವೃದ್ಧಿ ಚಟುವಟಿಕೆಗಳು ನಡೆಯಬೇಕು ಎಂಬ ಕೂಗು ಜೋರಾಗಿದೆ.

ಎಲ್ಲಾ ವಿರೋಧಗಳ ನಡುವೆಯೂ ರಸ್ತೆ ಅಭಿವೃದ್ಧಿಯನ್ನು ಹೊರತುಪಡಿಸಿ ಬೆಟ್ಟದ ಮೇಲೆ ಕಟ್ಟಡ ನಿರ್ಮಾಣ ಕೆಲಸಗಳಿಗೆ ಚಾಲನೆ ನೀಡಲಾಗಿದೆ.

## ಚಾಮುಂಡಿ ಬೆಟ್ಟದ ಮಹತ್ವ

ರಾಷ್ಟ್ರದ ಪ್ರವಾಸಿ ತಾಣಗಳಲ್ಲಿ ಮುಂಚೂಣಿಯಲ್ಲಿರುವ ಮೈಸೂರಿಗೆ ಭೇಟಿ ನೀಡುವ ಪ್ರವಾಸಿಗರು ಸಾಮಾನ್ಯವಾಗಿ ಮೊದಲು ಚಾಮುಂಡೇಶ್ವರಿಗೆ ನಮಿಸಿ ತಮ್ಮ ಪ್ರವಾಸಕ್ಕೆ ಮುನ್ನುಡಿ ಬರೆಯುತ್ತಾರೆ. ಜಗದ್ವಿಖ್ಯಾತ ಅಂಬಾವಿಲಾಸ ಅರಮನೆಗೆ ಭೇಟಿ ನೀಡುವಷ್ಟೇ ಸಂಖ್ಯೆಯ ಪ್ರವಾಸಿಗರು, ಭಕ್ತರು ಚಾಮುಂಡೇಶ್ವರಿ ದರ್ಶನ ಪಡೆದು ಧನ್ಯತಾಭಾವದಿಂದ ಮುಂದಿನ ಪ್ರವಾಸದತ್ತ ಹೆಜ್ಜೆ ಹಾಕುತ್ತಾರೆ.

ಹಸಿರು ಸಿರಿಯನ್ನು ಹೊದ್ದು ಮಲಗಿರುವ ಚಾಮುಂಡಿಬೆಟ್ಟದತ್ತ ಮುಖ ಮಾಡುತ್ತಿದ್ದಂತೆಯೇ ಕ್ಯಾಮೆರಾ, ಮೊಬೈಲ್‌ಗಳು ಕಾನನದ ಐಸಿರಿಯನ್ನು ಸೆರೆ ಹಿಡಿಯಲಾರಂಭಿಸುತ್ತವೆ. ಬೆಟ್ಟದ ಪರಿಸರ, ಪ್ರಶಾಂತ ವಾತಾವರಣ, ಹಕ್ಕಿಗಳ ಕಲರವ, ಚಿಟ್ಟೆಗಳ ಝೇಂಕಾರ ದಾಖಲಾಗುತ್ತಾ ಹೋಗುತ್ತದೆ. ಬೆಟ್ಟಕ್ಕೆ ಅಡಿ ಇಡುತ್ತಿದ್ದಂತೆಯೇ ಮನಸ್ಸು ಅರಳುತ್ತದೆ, ಮುಖದಲ್ಲಿ ಮಂದಹಾಸದ ಗೆರೆ ಮೂಡುತ್ತದೆ, ಏನೋ ಒಂದು ರೀತಿಯ ಪುಳಕ!

ಆಸ್ತಿಕರಿಗಂತೂ ಭಕ್ತಿಭಾವ. ಮಹಿಷಾಸುರ ಮರ್ಧಿನಿಯ ದರ್ಶನವೇ ಮುಖ್ಯ. ಮನದಲ್ಲಿ ಏನೋ ತುಂಬಿಕೊಂಡ, ಇದ್ದ ಭಾರ ಇಳಿಸಿಕೊಂಡ, ಮನಸ್ಸು ಒಂದಷ್ಟು ಹಗುರವಾದ ಭಾವ ಮೂಡುತ್ತದೆ. ದೇವಿಯ ಸ್ಮರಣೆ, ಮುದನೀಡುವ ಪರಿಸರದ ನೆನಪಿನೊಂದಿಗೆ ಹೆಜ್ಜೆ ಹಾಕುತ್ತಾ ಬೆಟ್ಟದಿಂದ ಇಳಿಯುತ್ತಾರೆ. ಮೈಸೂರಿಗೆ ಬಂದಾಗಲೆಲ್ಲ ಮತ್ತೆ ಮತ್ತೆ ದೇವಿಯ ದರುಶನ ಮಾಡುತ್ತಲೇ ಇರುತ್ತಾರೆ. ಪ್ರತಿ ಬಾರಿಯೂ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿ ಹೊರ ಬರುವಾಗಲೂ ಇದೇ ಭಕ್ತಿ ಭಾವ ಒಡಮೂಡುತ್ತಲೇ ಇರುತ್ತದೆ. ದೇವಿಯು ನಮ್ಮ ಕಷ್ಟಗಳಿಗೆ ಪರಿಹಾರ ನೀಡುತ್ತಾಳೆ, ಆಸೆ, ಆಕಾಂಕ್ಷೆಗಳನ್ನು ಈಡೇರಿಸುತ್ತಾಳೆ. ಪೂಜಿಸಿ, ಆಶೀರ್ವಾದ ಪಡೆದರೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆ ಆಸ್ತಿಕರಲ್ಲಿ  ಆಳವಾಗಿ ಬೇರೂರಿದೆ.

ಹಾಗೆಂದು ಇಲ್ಲಿಗೆ ಆಸ್ತಿಕರು ಮಾತ್ರ ಬರುವುದಿಲ್ಲ. ದೇಶ, ವಿದೇಶಗಳ ಪ್ರವಾಸಿಗರೂ ಆಗಮಿಸುತ್ತಾರೆ. ಅವರಲ್ಲಿ ಬಹುತೇಕರು ಚಾಮುಂಡೇಶ್ವರಿ ದರ್ಶನ ಪಡೆಯುವುದು ವಾಡಿಕೆ. ಪ್ರವಾಸಿ ಗೈಡ್‌ಗಳೂ ಸಹ ದೂರದೂರಿನಿಂದ ಬಂದ ಪ್ರವಾಸಿಗರಿಗೆ ಮೊದಲು ಚಾಮುಂಡಿ ಬೆಟ್ಟ ಹತ್ತಿಸುತ್ತಾರೆ. ಕೆಲವರು ಪೂಜೆ ಸಲ್ಲಿಸದಿದ್ದರೂ ಒಮ್ಮೆ ಬೆಟ್ಟವನ್ನು ಹತ್ತಿ, ಸುತ್ತಾಡಿ ಪ್ರಕೃತಿಯ ಸೊಬಗನ್ನು ಕಣ್ತುಂಬಿಕೊಂಡು ಬರುತ್ತಾರೆ. ಚಾಮುಂಡಿಬೆಟ್ಟ ನೋಡದವರು, ಇಲ್ಲಿಗೆ ಭೇಟಿ ಕೊಡದಿದ್ದರೆ ಎಂಥ ಪ್ರಕೃತಿ ಸೊಬಗು ಕಳೆದುಕೊಳ್ಳುತ್ತಿದ್ದೆವು ಎನ್ನುತ್ತಾರೆ. ಬೆಟ್ಟಕ್ಕೆ ಬಂದದ್ದು ಒಳ್ಳೆಯದಾಯಿತು ಎನ್ನುವ ನಾಸ್ತಿಕರೂ ಸಾಕಷ್ಟು ಮಂದಿ ಇದ್ದಾರೆ.

## ದುರ್ಗೆಯ ಅವತಾರ